ಅವನಿಗೇನು ಗೊತ್ತಿದೆ ಮಂಗನಿಗೆ? ಇವ್ನು ಆಕೆಗೆ ಕಾದು ಕಾದು... ತಲೆಕೆಟ್ಟು ನಂತರ ಸೀದ, ಆ ತಿಂಗಳ ಬೆಳಕಲ್ಲೇ ಸೂಳೆಸಿದ್ದು ಮನೆಗೆ ಹೋಗಿ... ಸಿದ್ದುವಿನ ಗಂಧಪೂಸಿದ ಮೈಗೆ ಮೂಗಿಟ್ಟು... ತಾನು ಬಂದ ನದಿ ದಾಟಿ ಬಂದ 'ಕತೆ'ಯನ್ನು ಅವಳಿಗೆ ಹೇಳಿದ ನಂತರವೇ ಅವನಿಗೆ ಗೊತ್ತಾಯ್ತಂತೆ... ಆ ಹೆಂಗಸು ಯಾರು?... ಆಕೆಯ ಶಕ್ತಿ ಏನು, ಕಾರ್ಣಿಕ ಏನು? ಅನ್ನುವುದು. ಅದು ಜುಮಾದಿ(ಧೂಮಾವತಿ) ದೈವವಲ್ಲದೆ ಬೇರಾರೂ ಅಲ್ಲ ಎಂಬುದನ್ನು ಆತ ಸೂಳೆಸಿದ್ದುವಿನ ಬಾಯಿಂದ ಕೇಳಿದ ನಂತರದಲ್ಲಿ, ಆತ ಆ ದೈವದ ಕರುಣೆಗೆ ಕಾರ್ನಿಕಕ್ಕೆ ಮೆಚ್ಚಿ, ದೈವಕ್ಕೆ ಒಂದು ಭಾರೀ ಚಂದದ ಬೆಳ್ಳಿಯ ಕಟ್ಟಳೆ ಮಾಡಿ ಸಿದ್ದುವಿನ ಕೈಯಲ್ಲೇ ಕೊಟ್ಟನಂತೆ. ಸಿದ್ದು ಅದನ್ನು ನಮ್ಮಜ್ಜನ ಅಜ್ಜನ ಅಪ್ಪನ ಕೈಗೆ ಒಪ್ಪಿಸಿದ್ಳಂತೆ. ಆ ಬೆಳ್ಳಿಯ ಕಟ್ಟಳೆಯ ಕೈಯಲ್ಲಿ 'ಜಾನ್‌ಹೆನ್ರಿ' ಅಂತಾ ಕೆತ್ತಿತ್ತಂತೆ. ಅದನ್ನು ನಮ್ಮಜ್ಜನ ಅಜ್ಜನೂ ನೋಡಿದ್ರಂತೆ. ನಮ್ಮಜ್ಜನ ಅಜ್ಜ ಅಂದ್ರೆ ಯಾರು ಅಂತ ನಿಂಗೆ ಗೊತ್ತಾಯ್ತಲ್ವ... ಅದೇ ಸೂಳೆಸಿದ್ದುವಿನ ಹಿರಿಮಗಳ ಪಲ್ಲಂಗದ ಗಿರಾಕಿ...'

> **"ಅಲ್ಲ ಮಾರಾಯ... ನಮ್ಮ ನಾರ್ಣಮಯ್ಯರಲ್ಲಿ ಮೊನ್ನೆ ನಾನು ...ಎಲ್ಲೂ ಬಿಳಿಕೇಪಳ ಮರವೇ ಸಿಕ್ತಾ ಇಲ್ಲ; ಬೇರೆ ಮರದಲ್ಲಿ 'ಕೊಡಿಮರ' ಮಾಡ್ಬಹುದಾ ಅಂತ ಕೇಳಿದ್ರೆ 'ಮೂಡ್ಲಾಗಿನ ಕಾಡಲ್ಲಿ ಈಗಲೂ ಆ ಬಿಳಿಕೇಪಳದ ಮರ ಸಿಗ್ಬಹುದು... ಸಿಗುದಿಲ್ಲ ಅಂತಾ ಇಲ್ಲಿ ಅಳುತ್ತ ಕೂತ್ರೆ ಕೆಲಸ ಆಗುತ್ತಾ ಮಾರಾಯ. ನೀನು ಹೋಗಿ ಸ್ವಲ್ಪ ಹುಡುಕ್ಬೇಕು ಅಷ್ಟೇ...'**

'ಅಲ್ಲಾ ಶೆಟ್ರೇ... ಇದು ನಿಜಕ್ಕೂ ನಡೆದಿರ್ಬಹುದಾ?...' ಅಂತ ಶ್ರೀಧರಾಚಾರಿ ದೇವಪ್ಪಶೆಟ್ರರನ್ನು ಕೇಳಿದ್ರೆ... 'ಉಮ್ಮ; ಆ ದೈವದ ಕಾರಣಿಕ ಇತ್ತಂತೆ ನಿಜ. ಅಜ್ಜನ ಅಜ್ಜ ಸೂಳೆಸಿದ್ದುವಿನ ಮನೆಯಲ್ಲಿ ಬಿದ್ದಿದ್ದದ್ದೂ ನಿಜ. ಆಕೆಗೆ ಪರಂಗಿ ದೊರೆಯ ಚಂಗಯಿ ಇದ್ದದ್ದೂ ನಿಜ. ಹಾಗಿದ್ದಲ್ಲಿ ಆ ದೈವ, ನದಿಯಲ್ಲಿ ದೋಣಿ ಬಿಟ್ಟದ್ದು ಯಾಕೆ ನಿಜ ಇರ್ಬಾರ್ದು?... ಹೇಳು; ಈ ಲೋಕ ಸೂರ್ಯದೇವರ ಸುತ್ತ ಸುತ್ತುತ್ತೆ ಅಂತ ನನ್ನ ಮಗ ಬಾಚು ಹೇಳಿದಾಗ, ನಾನು ಎಷ್ಟರ ಮಟ್ಟಿಗೆ ಅದನ್ನು ನಂಬಿದೆನೋ ಬಿಟ್ಟೆನೋ... ಹಾಗೆ, ಈ ವಿಷಯದಲ್ಲೂ ಕೂಡಾ ನಂಬಿಕೆ ಹಾಗೆಯೆ ಮತ್ತು ಅಷ್ಟೇ ಎಂದು ತಾವು ಹೇಳಿದ ಆ ಕತೆಗೆ ತೆರೆ ಎಳೆದಿದ್ದರು.

ಪಟೇಲ್ರು ಕತೆ ಮುಗಿದೊಡನೆ ಕೂತಲ್ಲಿಂದ ಎದ್ದವನೇ ಪೂವ ಮರಕಾಲ 'ಹಾಗಾದ್ರೆ ನಿಮ್ಮಜ್ಜನ ಅಜ್ಜನ ಕಾಲದ ಆ ದೈವ ನೆಲಕಚ್ಚಿ ಕೂತ ಮೇಲೆ, ಆ ಪರಂಗಿ ದೊರೆ ಕೊಟ್ಟ ಬೆಳ್ಳಿಯ ಕಟ್ಟಲೆಯನ್ನು ನಿಮ್ಮಜ್ಜನ ಅಜ್ಜ ಏನು ಮಾಡಿರ್ಬಹುದು? ಅದನ್ನು ಕರಗಿಸಿಬಿಟ್ಟು ಸೂಳೆಸಿದ್ದುವಿನ ಮಗಳ ಕಾಲ್ಗಳಿಗೆ ಸರಪಳಿ ಗೆಜ್ಜೆ ಮಾಡಿಸಿಕೊಟ್ರಾ... ಹೇಗೆ ?!' ಎಂದು ಹೇಳಿದಾಗ ಪಟೇಲ್ರು 'ಯಾರಿಗೆ ಗೊತ್ತುಂಟು ಮಾರಾಯ... ನಂದರಾಯನ ಬದುಕು ನರಿ, ನಾಯಿ ತಿಂದು ಹೋದ ಹಾಗೆ, ಇದೂ ಸತ್ಯನಾಶ ಆಗಿ ಹೋಗಿದ್ಯೇನೋ?... ನಾವೇನು ಅದನ್ನು ಅಷ್ಟಮಂಗಲದಲ್ಲಿ ಇಟ್ಟು ಕೇಳುದಕ್ಕೆ ಹೋಗ್ಲಿಲ್ಲ ಮಾರಾಯ; ಅಮೃತ ತೆಗೆಯಲು ಹೋಗಿ... ವಿಷ ಬಂದರೆ ಮತ್ತೇನು ಮಾಡುದು?' ಎಂದು ನಗುತ್ತಾ ಉತ್ತರಿಸಿದ್ದರು. 'ಇರ್ಲಿ... ಇರ್ಲಿ... ನಾನು ಸುಮ್ನೆ